ಅಗರ್ಬಿಯನ್ನು 'ನೈಜೀರಿಯದ ಜಾಡಮಾಲಿ' ಎಂದು ಹೊಗಳಿ ಬರೆಯಲಾಯಿತು. ಜಾಡಮಾಲಿ ಇಗ್ನೇಶಿಯಸ್ ಬಳಸಿದ ಪೊರಕೆಗೆ ಭ್ರಷ್ಟರೆಲ್ಲಾ ಬೆಚ್ಚಿ ಬೀಳತೊಡಗಿದರು. ದಿನ ಕಳೆದಂತೆ ಅಧಿಕಾರಿಗಳ ಹಿಂಡು ಹಿಂಡೇ ಜೈಲು ಸೇರತೊಡಗಿತು. ಇಗ್ನೇಶಿಯಸ್ ಅಗರ್ಬಿ ಕ್ರಮೇಣ ನೈಜೀರಿಯದಲ್ಲಿ ಮನೆ ಮಾತಾದ. ಗಾಳಿಸುದ್ದಿಗಳು ಸುನಾಮಿಯಂತೆ ಹರಡತೊಡಗಿದವು. ನೈಜೀರಿಯದ ಅಧ್ಯಕ್ಷ "ಜನರಲ್ ಒಟೋಬಿಯ ಹೆಸರು ಕೂಡ ಅಗರ್ಬಿಯ ಲಿಸ್ಟಿನಲ್ಲಿದೆಯಂತೆ!!" ಎಂದು ಜನ ಆಶ್ಚರ್ಯದಿಂದ ಮಾತನಾಡತೊಡಗಿದರು.

ಈಗ ನೂರು ಮಿಲಿಯನ್ ಡಾಲರು ಮೇಲ್ಪಟ್ಟ ಗುತ್ತಿಗೆಗಳನ್ನು ಸ್ವತಃ ಅಗರ್ಬಿಯೇ ಪರಿಶೀಲಿಸಲು ಆರಂಭಿಸಿದ. ಇದರಿಂದಾಗಿ ಅವನಿಗೆ ಶತ್ರುಗಳ ಸಂಖ್ಯೆಯೂ ಹೆಚ್ಚಾಗತೊಡಗಿತು. ಆದರೂ ಅವನ ಪ್ರಾಮಾಣಿಕತೆಯನ್ನು ಯಾರೂ ಪ್ರಶ್ನೆಮಾಡುವಂತಿರಲಿಲ್ಲ.

ಅವನು ಅಧಿಕಾರ ವಹಿಸಿಕೊಂಡ ಎರಡು ವರ್ಷಗಳ ಅನಂತರ ಅವನ ವಿಮರ್ಶಕರೂ ತಲೆದೂಗತೊಡಗಿದರು. ಒಂದು ದಿನ ಹಠಾತ್ತಾಗಿ ನೈಜೀರಿಯಾದ ಅಧ್ಯಕ್ಷ ಜನರಲ್ ಒಟೊಬಿ ಇಗ್ನೇಶಿಯಸ್ ಅಗರ್ಬಿಯನ್ನು ತಮ್ಮ ಬಳಿಗೆ ಕರೆಸಿಕೊಂಡರು.

